# ಹಕ್ಕಿನ ಅರಿವು ಬೇಕು



**ಕಿರಣ್ ಮಜುಂದಾರ್ ಷಾ**

**ಯಶಸ್ವಿ ಉದ್ಯಮಿ**

ಬಯೊಕಾನ್ ಕಂಪೆನಿಯ ವ್ಯವಸ್ಥಾಪಕ ನಿರ್ದೇಶಕಿ, ಯಶಸ್ವಿ ಉದ್ಯಮಿ ಕಿರಣ್ ಮಜುಂದಾರ್ ಷಾ ಎಲ್ಲ ಹೆಣ್ಣುಮಕ್ಕಳೂ ಕಣ್ಣರಳಿಸಿ ನೋಡುವಂತಹ ಅಗಾಧ ಸಾಧನೆಯ ಒಡತಿ. ಸ್ವಾತಂತ್ರ್ಯವನ್ನೇ ಸದಾ ಉಸಿರಾಡುತ್ತಿರುವ ಕಿರಣ್ ಅವರು ಮಹಿಳಾ ಸ್ವಾತಂತ್ರ್ಯದ ಬಗ್ಗೆ ತಮ್ಮದೇ ಆದ ವಿಭಿನ್ನ ದೃಷ್ಟಿಕೋನ ಹೊಂದಿದವರು.

ಸ್ವತಂತ್ರ ಭಾರತದಲ್ಲಿ ಎಲ್ಲ ಮಹಿಳೆಯರು ಸಮಾನವಾಗಿ ಸ್ವತಂತ್ರರು ಎಂದು ಹೇಳಲಾಗದು. ನಗರ ಪ್ರದೇಶಗಳಲ್ಲಿ ಹೆಣ್ಣು ಸ್ವತಂತ್ರಳಾದರೆ, ಪಟ್ಟಣ ಮತ್ತು ಗ್ರಾಮೀಣ ಭಾಗಗಳಲ್ಲಿ ಮಹಿಳೆಗೆ ಇನ್ನೂ ತನ್ನ ಹಕ್ಕುಗಳ ಬಗ್ಗೆ ಅರಿವು, ಜಾಗೃತಿಯ ಕೊರತೆ ಇದೆ. ಹೀಗಾಗಿ ಈ ಭಾಗದ ಮಹಿಳೆಯರಿಗೆ ಜಾಗೃತಿ ಮೂಡಿಸುವ ಅಗತ್ಯ ಇದೆ.

ಅತ್ಯಾಧುನಿಕ ತಾಂತ್ರಿಕ ಸವಲತ್ತುಗಳು ಲಭ್ಯವಿರುವ ಈ ದಿನಗಳಲ್ಲಿ ಮಾಹಿತಿ ತಂತ್ರಜ್ಞಾನ, ಟೀವಿ, ಫೇಸ್‌ಬುಕ್, ವಾಟ್ಸಪ್ ಗಳಿರುವ ಕಾರಣ ಮಹಿಳೆಗೆ ಹೆಚ್ಚು ಹೆಚ್ಚು ಮಾಹಿತಿ ಸಿಗುತ್ತಿದೆ. ಸ್ವತಂತ್ರಳಾಗುವ ನಿಟ್ಟಿನಲ್ಲಿ ಯೋಚನೆ ಮಾಡುತ್ತಿದ್ದಾಳೆ. ಆಧುನಿಕ ಮಹಿಳೆಗೆ ತನ್ನ ಹಕ್ಕುಗಳ ಬಗ್ಗೆ ಅರಿವಿದೆ. ಆದರೆ ಗ್ರಾಮೀಣ ಮಹಿಳೆಯರಿಗೆ ಈ ಹಕ್ಕುಗಳ ಬಗ್ಗೆ ಗೊತ್ತಿಲ್ಲ. ಹಾಗಾಗಿ ಅವರಿಗೆ ಸ್ವಾತಂತ್ರ್ಯದ ಬಗ್ಗೆಯೂ ಅಷ್ಟಾಗಿ ಅರಿವಿಲ್ಲ. ಅವರಲ್ಲಿ ಜಾಗೃತಿ ಮೂಡಿಸಬೇಕಾಗಿದೆ.

ನಮ್ಮ ಮನೆಯಲ್ಲಿ ನನಗೆ ಅಪ್ಪ ಅಮ್ಮನ ಸಹಕಾರ ಸದಾ ಇತ್ತು. ನನಗೆ ಎಲ್ಲೂ ಕೊರತೆ ಅನಿಸಲೇ ಇಲ್ಲ. ನನ್ನ ಇಬ್ಬರು ಸಹೋದರರ ಜತೆಗೆ ನನ್ನನ್ನೂ ಸಮನಾಗಿ ನೋಡಿ ಎಲ್ಲ ರೀತಿಯ ಸಹಕಾರ ಕೊಟ್ಟಿದ್ದಾರೆ. ಹೀಗಾಗಿ ನನಗೆ ಹೆಣ್ಣು ಮಗು–ಗಂಡು ಮಗು ಎಂಬ ವ್ಯತ್ಯಾಸವೇ ಇಲ್ಲದ ಹಾಗೆ ಬೆಳೆದೆ. ಎಲ್ಲರಿಗೂ ಒಳ್ಳೆಯ ಶಿಕ್ಷಣ ಸಿಕ್ಕಿದೆ. ಎಲ್ಲರೂ ಸ್ವತಂತ್ರರಾಗಿ ನಿರ್ಧಾರ ತಗೊಂಡು ಸ್ವತಂತ್ರರಾಗಿಯೇ ಇದ್ದೇವಿ. ಪ್ರತಿ ಮನೆಯಲ್ಲೂ ಹೆಣ್ಣು ಮಕ್ಕಳಿಗೆ ನೈತಿಕ ಬೆಂಬಲ, ಉತ್ತಮ ಶಿಕ್ಷಣವನ್ನು ಹೆತ್ತವರು ಒದಗಿಸಿದರೆ ಆಕೆ ಸ್ವತಂತ್ರಳಾಗಲು ಖಂಡಿತ ಸಾಧ್ಯ.

> **ಎಲ್ಲ ಮಹಿಳೆಯರೂ ಸಮಾನ ಸ್ವತಂತ್ರರಲ್ಲ**

ಮನೆಯಲ್ಲಿ ಹೆಣ್ಣು ಮಗು ಹುಟ್ಟಿದೆ ಅಂದ್ರೆ ಅದು ಮುಂದೆ ಬೆಳೆದು ದೊಡ್ಡವಳಾದ ಮೇಲೆ ಮದುವೆ ಮಾಡಿ ಕೊಡೋದಕ್ಕೆ ಅಂತ ಹೆತ್ತವರು ಯೋಚನೆ ಮಾಡಬಾರದು. ಅಂಥ ಕುಟುಂಬ ಏನೂ ಸಾಧಿಸಲಾಗದು.

ನಮ್ಮ ಮನೆಯಲ್ಲಿ ಮನೆ ಕೆಲಸಕ್ಕೆಂದು ಒಂದು ಕುಟುಂಬ ಇತ್ತು. ಅವರಿಗೆ ಒಂದು ಹೆಣ್ಣು ಒಂದು ಗಂಡು.. ಇಬ್ಬರು ಮಕ್ಕಳು. ಇಬ್ಬರನ್ನೂ ನಾನು ಓದಿಸಿದೆ. ಹೆಣ್ಣು ಮಗು ಬಿಎಸ್‌ಸಿ ಕಂಪ್ಯೂಟರ್ ಸೈನ್ಸ್ ಓದಿ ಡಿಸ್ಟಿಂಕ್ಷನ್‌ನಲ್ಲಿ ಪಾಸಾದಳು. ಈಗ ಎಂಎಸ್‌ಸಿ ಮಾಡಿ ಎಂಬಿಎ ಮಾಡ್ತೀನಿ ಎಂಬ ಉತ್ಸಾಹ ತೋರಿಸಿದ್ದಾಳೆ. ಹುಡುಗ ಎಂಬಿಎ ಮಾಡಿ 'ಆರೇಕಲ್'ನಲ್ಲಿ ಕೆಲಸಕ್ಕೆ ಸೇರಿದ. ಈಗ ಆ ಕುಟುಂಬ ಆರ್ಥಿಕವಾಗಿಯೂ ಸ್ವಾವಲಂಬನೆ ಸಾಧಿಸಿದೆ. ಹುಡುಗಿ ಓದಿನಲ್ಲಿ ಮುಂದಿದ್ದು ಮನೆಗೆ ದಾರಿದೀಪ ಆಗ್ತಾಳೆ. ಹೆಣ್ಣು ಮಕ್ಕಳಲ್ಲಿ ಉತ್ತಮ ಪ್ರತಿಭೆ, ಸಾಧಿಸುವ ಛಲ ಇರುತ್ತದೆ. ಇದನ್ನು ಗುರುತಿಸಿ ಉತ್ತಮ ಶಿಕ್ಷಣ ನೀಡಿದರೆ ಕುಟುಂಬ, ಸಮಾಜ ಎಲ್ಲವೂ ಸುಗಮವಾಗಿ ನಡೆಯುತ್ತದೆ.

ಕುಟುಂಬದಲ್ಲಿ ಮಹಿಳೆಯದು ಬಹುವಿಧದ ಪಾತ್ರ. ಹಿಂದಿನ ಕಾಲ ದಿಂದಲೂ ಮಹಿಳೆ ಅಡುಗೆ ಮಾಡುವುದಕ್ಕೆ, ಮನೆಯನ್ನು ಮುನ್ನಡೆಸಿಕೊಂಡು ಬರುವುದಕ್ಕೆ ಇರುವವಳು, ಪುರುಷ ಹೊರಗೆ ದುಡಿದು ಬಂದು ಮನೆಯ ಬೇಕು–ಬೇಡಗಳನ್ನು ಪೂರೈಸುವವನು. ಮನೆಯಲ್ಲಿ ಹೆಣ್ಣು ಅಡುಗೆ ಮಾಡ್ತಾಳೆ ಎಂಬ ಕಾರಣಕ್ಕೆ ಆಕೆಗೆ ಸ್ವಾತಂತ್ರ್ಯ ಸಿಕ್ಕಿಲ್ಲ ಎಂದು ಹೇಳಲಾಗದು. ಈಗಿನ ಮಹಿಳೆ ಹೊರಗೆಯೂ ದುಡಿದು ಮನೆಯನ್ನೂ ಮುನ್ನಡೆಸಿಕೊಂಡು ಹೋಗುವ ಜವಾಬ್ದಾರಿ ವಹಿಸಿರುವುದರಿಂದ ಮಹಿಳೆ ತುಂಬ ಶಕ್ತಿಶಾಲಿಯಾಗಿದ್ದಾಳೆ ಎಂದೇ ಹೇಳಬಹುದು.

ಒಂದು ಮನೆಯಲ್ಲಿ ತಾಯಿ ಒಳ್ಳೆಯ ವೃತ್ತಿಯನ್ನು ಮಾಡುತ್ತಿದ್ದಾಳೆ ಎಂದರೆ ಮಕ್ಕಳಿಗೂ ಅದು ಹೆಮ್ಮೆಯ ವಿಷಯವೇ. ತಾಯಿಯ ಜವಾಬ್ದಾರಿಯನ್ನು ಮಕ್ಕಳು ಗೌರವಿಸುತ್ತಾರೆ. ಆಗ ಮಹಿಳೆಗೆ ಕೀಳರಿಮೆ ಎಂಬುದು ಬರಲು ಸಾಧ್ಯವೇ ಇಲ್ಲ. ನಮ್ಮ ಮನೆಯಲ್ಲೇ ಇರುವ ಒಂದು ಉದಾಹರಣೆ ನೋಡಿ.. ನನ್ನ ಅಣ್ಣನ ಮಗ ಎರಿಕ್ ಮಜುಂದಾರ್ ಅಂತ. ಆತ ಎನ್‌ಐಟಿ ಪರೀಕ್ಷೆ ಬರೆದು ಕ್ಯಾಲಿಫೋರ್ನಿಯ ವಿಶ್ವವಿದ್ಯಾನಿಲಯದಲ್ಲಿ ಪಿಎಚ್ ಡಿ ಮಾಡ್ತಿದ್ದಾನೆ. ಅವನಿಗೆ ನಮ್ಮ ಕುಟುಂಬದಲ್ಲಿರುವ ಹೆಣ್ಣು ಮಕ್ಕಳು ಬಹಳ ಪ್ರಭಾವ ಬೀರಿದ್ದೇವೆ ಅಂತ ಹೇಳ್ತಾನೆ. ನಾನು, ನನ್ನ ತಾಯಿ ಎಲ್ಲರೂ ಅವನ ಜೀವನದಲ್ಲಿ ಹೀರೋ ಅಂತನೇ ಭಾವಿಸಿದ್ದಾನೆ. ಹೀಗೆ ಕುಟುಂಬದ ಹೆಣ್ಣು ಮಕ್ಕಳ ಪ್ರಭಾವವೂ ಗಂಡಸರ ಮೇಲೆ ಬಹಳ ಆಗುತ್ತದೆ.

ಇಂದಿನ ಬಹಳಷ್ಟು ಮಹಿಳೆಯರು ಆರ್ಥಿಕವಾಗಿ ಸದೃಢರಾಗಿದ್ದಾರೆ. ನನ್ನ ತಾಯಿ (ಯಾಮಿನಿ) ಅವರಿಗೆ ಈಗ 86 ವರ್ಷ. ಬೆಂಗಳೂರಿನ ವೀರಸಂದ್ರದಲ್ಲಿ ಒಂದು ಡ್ರೈಕ್ಲೀನರ್ ಮತ್ತು ಲಾಂಡ್ರಿ ನಡೆಸುತ್ತಿದ್ದಾರೆ. ಕೋರಮಂಗಲದ ತಮ್ಮ ಮನೆಯಿಂದ ವೀರಸಂದ್ರಕ್ಕೆ ದಿನಾ ಹೋಗಿ ಕೆಲಸ ಮಾಡ್ತಾರೆ. ಆರ್ಥಿಕ ಸ್ವಾವಲಂಬನೆ, ಸ್ವಾತಂತ್ರ್ಯ ಎಂದರೆ ಇದೇ ತಾನೆ? ನನ್ನ ಸಹೋದರರಲ್ಲಿ ಒಬ್ಬ ಕೆನಡಾದಲ್ಲಿ ಪ್ರೊಫೆಸರ್, ಇನ್ನೊಬ್ಬ ಲಾಸ್ ಏಂಜಲೀಸ್‌ನಲ್ಲಿ ಸಾಫ್ಟ್‌ವೇರ್ ಕಂಪೆನಿ ನಡೆಸ್ತಾನೆ. ನಾನೂ ಒಬ್ಬ ಉದ್ಯಮಿ. ಇಷ್ಟಿದ್ದರೂ ಅಮ್ಮ ಸ್ವತಂತ್ರವಾಗಿ ಇರಬಯಸ್ತಾರೆ. ಹಾಗೆ ನೋಡಿದರೆ ನಮ್ಮ ತಾಯಿ ಬಹಳ ಸಾಂಪ್ರದಾಯಿಕವಾಗಿ ಬೆಳೆದು ಬಂದವರು. ಬಹಳಷ್ಟು ಜನ ನನ್ನ ಯಶಸ್ಸನ್ನು ನೋಡಿ ನನ್ನ ಬಳಿ ಬಂದು 'ನಿಮ್ಮ ಸಾಧನೆ ನೋಡಿ ಎಕ್ಸೈಟ್ ಆಗಿದ್ದೀವಿ' ಅಂತಾರೆ. ಆಗ ನನಗೂ ಬಹಳ ಖುಷಿ ಆಗುತ್ತೆ.

ಸಮಾಜದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಈಗೀಗ ಹೆಚ್ಚಾಗ್ತಾ ಇದೆ. ಇದಕ್ಕೆ ಕಾರಣ ಇಲ್ಲಿ ಬಲವಾದ ಕಾನೂನು ಇಲ್ಲದೇ ಇರುವುದು. ಕಾನೂನಿನ ಕಟ್ಟುನಿಟ್ಟಾದ ಅನುಷ್ಠಾನ, ಶಿಕ್ಷೆ ಮುಂತಾದವನ್ನು ಕಠಿಣಗೊಳಿಸಿದರೆ ದೌರ್ಜನ್ಯ ಕಡಿಮೆಯಾಗಬಹುದು. ಮಹಿಳೆಯರ ಮೇಲಿನ ಎಷ್ಟೋ ದೌರ್ಜನ್ಯ ಪ್ರಕರಣಗಳಲ್ಲಿ ತಪ್ಪಿತಸ್ಥರು ಪ್ರಭಾವಿ ವ್ಯಕ್ತಿಗಳ ಮಕ್ಕಳೇ ಇರುತ್ತಾರೆ. ಪ್ರಭಾವದಿಂದಲೇ ಪ್ರಕರಣ ದಾಖಲಾಗದಂತೆ ಅವರು ನೋಡಿಕೊಳ್ಳುತ್ತಾರೆ. ಸರಿಯಾದ ಸಾಕ್ಷ್ಯಾಧಾರಗಳಿಲ್ಲ ಎಂಬ ಕಾರಣಕ್ಕೆ ಎಷ್ಟೋ ಪ್ರಕರಣಗಳನ್ನು ಕೈಬಿಡಲಾಗುತ್ತದೆ. ಹೀಗಾಗಿ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಲೇ ಹೋಗುತ್ತವೆ. ಸಿಸಿಟಿವಿ, ಅತ್ಯಾಧುನಿಕ ತಂತ್ರಜ್ಞಾನಗಳನ್ನು ಬಳಸಿ ಅಪರಾಧಿಗಳನ್ನು ಹಿಡಿದು ಕಠಿಣ ಶಿಕ್ಷೆ ವಿಧಿಸಿದರೆ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಕಡಿಮೆ ಆಗಬಹುದು. ■